2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.22/2025
ಪಿ.ಡಬ್ಲ್ಯೂ: 09
ಸಿ.ಡಬ್ಲ್ಯೂ: 12

ಸಾಕ್ಷಿಯ ಹೆಸರುಃ ಶ್ರೀ. ಮೆಹಬೂಬ ಹುಸೇನಸಾಬ ಶೇಖ
ತಂದೆಯ ಹೆಸರುಃ ಹುಸೇನಸಾಬ ಶೇಖ
ವಯಸ್ಸುಃ 28 ವರ್ಷ
ಉದ್ಯೋಗಃ ಟ್ಯಾಕ್ಸಿ ಚಾಲಕ
ವಾಸಃ ರುಕ್ಮೀನಿ ನಗರ, ಬೆಳಗಾವಿ

**ದಿನಾಂಕಃ 29.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 23.10.2024 ರಂದು ರಾತ್ರಿ ಸುಮಾರು 08.30 ಗಂಟೆಗೆ ನನ್ನ ಕೆಲಸದ ನಿಮಿತ್ತ ನಾನು ಮಾಳಮಾರುತಿ ಪೋಲೀಸ್ ಠಾಣೆಗೆ ಹೋಗಿದ್ದೆ. ಸಂತೋಷ ಪದ್ಮನ್ನನವರ ಕೊಲೆಯಾಗಿದೆ ಆ ಸಂಬಂಧ ಪಂಚನಾಮೆ ಮಾಡಬೇಕಾಗಿದೆ ಎಂದು ಪಂಚರಾಗಿ ಬನ್ನಿ ಎಂದು ಕೇಳಿರುತ್ತಾರೆ. ಆ ಕಾಲಕ್ಕೆ ಮಂಜುನಾಥ ಎಂಬ ಆರೋಪಿ ಠಾಣೆಯಲ್ಲಿ ಇದ್ದ. ಆತ ಇಂಜೆಕ್ಷನ್ ಹಾಗೂ ಮಾತ್ರೆಗಳನ್ನು ತೆಗೆದುಕೊಂಡ ಜಾಗವನ್ನು ತೋರಿಸುತ್ತೇನೆಂದು ಹೇಳಿದ. ಆಗ ನನ್ನನ್ನು, ಮತ್ತೊಬ್ಬ ಪಂಚರ, ಆರೋಪಿ ಮಂಜುನಾಥ, ಪೋಲೀಸರು ಡಿ–ಮಾರ್ಟ್ ಪಕ್ಕದಲ್ಲಿರುವ ಅರಿಹಂತ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿ ಆಸ್ಪತ್ರೆಯ 5 ನೇ ಮಹಡಿಗೆ ಕರೆದುಕೊಂಡು ಹೋದ. ಅಲ್ಲಿ ಫ್ರಿಡ್ಜ ನ್ನು ತೋರಿಸಿ ಇಲ್ಲಿದ್ದ ಇಂಜೆಕ್ಷನ್ ನ್ನು ನಾನು ತೆಗೆದುಕೊಂಡಿರುತ್ತೇನೆಂದು ಹೇಳಿ ತೋರಿಸಿರುತ್ತಾನೆ. ಆ ಕಾಲಕ್ಕೆ ನಿದ್ರೆ ಮಾತ್ರೆಯನ್ನು ತೆಗೆದುಕೊಂಡ ಜಾಗವನ್ನು ಸಹ ತೋರಿಸಿರುತ್ತಾನೆ. ಆ ಕಾಲಕ್ಕೆ ಫೋಟೋ ತೆಗೆಸಿದರು ಹಾಗೂ ಈ ಸಬಂಧ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಕರೆದರೆ ಬರಬೇಕು ಎಂದು ಹೇಳಿರುತ್ತಾರೆ. ಆ ಬಗ್ಗೆ ಅಲ್ಲೇ ಬರೆದುಕೊಂಡು ಪಂಚರಾಗಿ ನಾನು ಸಹಿ ಮಾಡುತ್ತಿದ್ದೇನೆಂದು ಸಹಿ ಪಡೆದುಕೊಂಡಿರುತ್ತಾರೆ.

2. ಸಾಕ್ಷಿಯು ವಿ.ಸಿ. ಮೂಲಕ ಹಾಜರಾಗಿರುವ 5 ಜನ ಆರೋಪಿತರ ಪೈಕಿ ಒಬ್ಬ ಆರೋಪಿಯನ್ನು ಗುರುತಿಸಿ ಇತನೇ ಮಂಜುನಾಥ ಎಂದು ಹೇಳಿರುತ್ತಾನೆ. ಆತನನ್ನು ಏಳಿಸಿ, ಕರೆಸಿ ಆತನ ಹೆಸರನ್ನು ಕೇಳಿದಾಗ ಆತನೇ ಮಂಜುನಾಥ ಎಂದು ಹೇಳಿರುತ್ತಾನೆ. ಸಾಕ್ಷಿಯು ಈಗ ಎರಡು ದಾಖಲೆಯನ್ನು ನೋಡಿ ಗುರುತಿಸಿದ್ದು ಒಂದು ಪೋಲೀಸರು ನೀಡಿ ನೋಟೀಸ್ ಎಂದು, ಮತ್ತೊಂದು ನಾನು ನೀಡಿದ ಒಪ್ಪಿಗೆ ಪತ್ರ ಎಂದು ಗುರುತಿಸಿದ್ದು ಸದರಿ ದಾಖಲೆಗಳನ್ನು ಈಗ ನಿಪಿಃ 55 ಮತ್ತು 56 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 55(ಎ) ಮತ್ತು 56(ಎ) ಎಂದು ಗುರುತಿಸಲಾಯಿತು. ಮತ್ತೊಂದು ದಾಖಲೆಯನ್ನು ನೋಡಿ ಇದು ಆ ಕಾಲಕ್ಕೆ ಮಾಡಿದ ಪಂಚನಾಮೆ ಎಂದು ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸಿದ್ದು ಅದನ್ನು ಈಗ ನಿಪಿಃ 57 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 57(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಫೋಟೋವನ್ನು ನೋಡಿ ಇದು ಪಂಚನಾಮೆ ಕಾಲಕ್ಕೆ ತೆಗೆದಿದ್ದು ಎಂದು ಅದರಲ್ಲಿ ಆರೋಪಿ ಮಂಜುನಾಥ, ಪೋಲೀಸರು, ನಾನು ಹಾಗೂ ಮತ್ತೊಬ್ಬ ಪಂಚ ಇದ್ದಾರೆ ಎಂದು ಗುರುತಿಸುತ್ತಾರೆ. ಸದರಿ ಫೋಟೋವನ್ನು ಈಗ ನಿಪಿಃ 58 ಎಂದು ಗುರುತಿಸಲಾಯಿತು.

3. ದಿಃ 04.12.2024 ರಂದು ಮತ್ತೇ ನನ್ನನ್ನು ಅರಿಹಂತ ಆಸ್ಪತ್ರೆಯ ಬಳಿ ಕರೆಸಿದ್ದರು. ಅಲ್ಲಿ ಒಬ್ಬ ವೈದ್ಯರು ಇದ್ದರು, ಅವರ ಬಳಿ ಆರೋಪಿ ಮಂಜುನಾಥ ಕೆಲಸ ಮಾಡುತ್ತಿದ್ದನಂತೆ. ಆ ಕಾರಣಕ್ಕಾಗಿ ಅಲ್ಲಿಗೆ ಪಂಚನಾಮೆಗೆ ಕರೆಸಿದ್ದರು. ಅಲ್ಲಿ ನಾನು, ಮತ್ತೊಬ್ಬ ಪಂಚ, ಪೋಲೀಸರು ಹಾಗೂ ಆ ಡಾಕ್ಟರ್ ಅಲ್ಲಿದ್ದರು. ಆ ಕಾಲಕ್ಕೆ ಫೋಟೋ ತೆಗೆದರು. ಅಲ್ಲಿ ಆದ ಸ್ಥಿತಿಗತಿಗಳ ಬಗ್ಗೆ ಲ್ಯಾಪಟಾಪ್ ನಲ್ಲಿ ಟೈಪ್ ಮಾಡಿಕೊಂಡು ಠಾಣೆಗೆ ಬಂದು ಪ್ರಿಂಟ ತೆಗೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಈಗ ಎರಡು ದಾಖಲೆಗಳನ್ನು ನೋಡಿ ಅದು ಮತ್ತೊಂದು ಪಂಚನಾಮೆಗೆ ನೀಡಿದ ನೋಟೀಸ್ ಹಾಗೂ ನಾನು ನೀಡಿದ ಒಪ್ಪಿಗೆ ಪತ್ರ ಎಂದು ಗುರುತಿಸುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿಃ 59 ಮತ್ತು 60 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿಃ 59(ಎ) ಮತ್ತು 60(ಎ) ಎಂದು ಗುರತಿಸಲಾಯಿತು. ಸಾಕ್ಷಿಯು ಮತ್ತೊಂದು ದಾಖಲೆಯನ್ನು ನೋಡಿ ಇದೇ ಆ ಕಾಲಕ್ಕೆ ಮಾಡಿದ ಪಂಚನಾಮೆ ಎಂದು ಅದರಲ್ಲಿ ಸಹಿ ಇದೆ ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿಃ 61 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 61(ಎ) ಎಂದು

ಗುರುತಿಸಲಾಯಿತು. ಒಂದು ಫೋಟೋವನ್ನು ನೋಡಿ ಇದು ಆ ಕಾಲಕ್ಕೆ ತೆಗೆದ ಫೋಟೋ ಎಂದು ಗುರುತಿಸಿದ್ದರಿಂದ ಅದನ್ನು ನಿಪಿಃ 62 ಎಂದು ಗುರುತಿಸಲಾಯಿತು.

4. ನ್ಯಾಯಾಲಯದ ಮುಂದೆ ವಿ.ಸಿ. ಮುಾಲಕ ಹಾಜರಾಗಿರುವ 5 ಆರೋಪಿತರ ಪೈಕಿ ಒಬ್ಬ ವ್ಯಕ್ತಿಯನ್ನು ನೋಡಿ ಗುರುತಿಸಿ ಆ ಸಾಲಿನಲ್ಲಿ ಕೈಕಟ್ಟಿ ಕುಳಿತುಕೊಂಡಿರುವ ಮೊದಲನೇ ವ್ಯಕ್ತಿಯೇ ಆ ದಿನ ಜಾಗ ತೋರಿಸಿದ ವ್ಯಕ್ತಿ ಎಂದು ಗುರುತಿಸುತ್ತಾರೆ. ಆ ವ್ಯಕ್ತಿಯನ್ನು ಏಳಿಸಿ ಹೆಸರನ್ನು ಕೇಳಿದಾಗ ಅವರು ನನ್ನ ಹೆಸರು ಪ್ರಶಾಂತ ಎಂದು ಹೇಳಿರುತ್ತಾರೆ ಅವರು ಈ ಪ್ರಕರಣದ 5 ನೇ ಆರೋಪಿಯಾಗಿರುತ್ತಾರೆ.

**<u>ಪಾಟೀ ಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ. ಎಲ್.ಎಂ.ಎಚ್. ವಕೀಲರಿಂದಃ</u>**

5. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಮ್ಮ ಮನೆ ಮಾಳಮಾರುತಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವುದರಿಂದ ಪೋಲೀಸರ ಪರಿಚಯವಿದೆ ಎನ್ನುವುದು ಸರಿ. ಪೋಲೀಸರು ಕೊಟ್ಟಿದ್ದ ನೋಟೀಸ ನಲ್ಲಿ ಬರೆದಿದ್ದ ವಿಚಾರಗಳನ್ನು ನಾನೇನು ಅಷ್ಟು ಗಮನವಿಟ್ಟು ಓದಿರುವುದಿಲ್ಲ. ಅವರ ಠಾಣೆಯ ಯಾವ ಗುನ್ನಾ ಸಂಖ್ಯೆಯ ವಿಚಾರವಾಗಿ ಪಂಚನಾಮೆಗೆ ಕರೆದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಿಪಿಃ 55 ರಲ್ಲಿ ಏನು ಬರೆದಿದೆ ಎಂದು ನನಗೆ ಅಷ್ಟಾಗಿ ಗೊತ್ತಿಲ್ಲ. ನಾನೇನು ಪೋಲೀಸರಿಗೆ ಹೀಗೆ ಬರೆಯಿರಿ ಎಂದು ವಿಚಾರಗಳನ್ನು ಹೇಳಿ ಬರೆಸಿಲ್ಲ. ಪಂಚನಾಮೆಯನ್ನು ಯಾರು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಫೋಟೋಗಳಲ್ಲಿ ಅದನ್ನು ತೆಗೆದ ದಿನಾಂಕ ಹಾಗೂ ಸಮಯ ನಮೂದಿಲ್ಲ ಎಂದರೆ ಸರಿ. ಪೋಲೀಸರು ನನಗೆ ಯಾವುದೇ ನೋಟೀಸ್ ನೀಡಿ ಪಂಚನಾಮೆಗೆ ಕರೆದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಿಃ 23.10.2024 ರಂದು ಪೋಲೀಸರು ಡಿಮಾರ್ಟ ಬಳಿ ಇರುವ ಅರಿಹಂತ ಆಸ್ಪತ್ರೆಯ ಬಳಿ ಪಂಚನಾಮೆಗೆ ಕರೆದುಕೊಂಡು ಹೋಗಿದ್ದರು ಆ ಕಾಲಕ್ಕೆ 4 ನೇ ಆರೋಪಿ ಜಾಗ ತೋರಿಸಿ ಇಲ್ಲಿಂದಲೆ ನಾನು ಇಂಜೆಕ್ಷನ್ ಹಾಗೂ ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡಿದ್ದ ಜಾಗ ಎಂದು ತೋರಿಸಿದ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. ಎಲ್ಲೋ ಯಾವುದೋ ಅಂಗಡಿಯ ಬಳಿ ನಿಲ್ಲಿಸಿ ತೆಗೆದಿದ್ದ ಫೋಟೋವನ್ನು ಅರಿಹಂತ ಆಸ್ಪತ್ರೆಯಲ್ಲಿ ತೆಗೆದಿದ್ದು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

6. ದಿಃ 04.12.2024 ರ ಪಂಚನಾಮೆಗೆ ನೀಡಿದ್ದ ನೋಟೀಸನಲ್ಲೂ ಸಹ ಏನು ಬರೆದಿದ್ದಾರೆಂದು ನಾನು ನೋಡಿ ಓದಿ ತಿಳಿದುಕೊಂಡಿಲ್ಲ. ಅದೇರೀತಿ ಅವರ ಠಾಣೆಯ ಯಾವ ಗುನ್ನಾ ಸಂಖ್ಯೆಯ ಪ್ರಕರಣಕ್ಕೆ ನನ್ನನ್ನು ಪಂಚನಾಗಿ ಕರೆದಿದ್ದಾರೆಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ದಿಃ 04.12.2024 ರಲ್ಲಿ ಅರಿಹಂತ ಆಸ್ಪತ್ರೆಯ ಬಳಿ ಪಂಚನಾಮೆ ಮಾಡಿದ ನಂತರ ನಾನು ಪೋಲೀಸ್ ಠಾಣೆಗೆ ಹೋಗಿಲ್ಲ ಎನ್ನುವುದು ಸರಿ. ನಿಪಿಃ 61 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅದನ್ನು ಬರೆದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ದಿಃ 04.12.2024 ರಂದು ಅರಿಹಂತ ಆಸ್ಪತ್ರೆಯ ಬಳಿ ಹೋಗಿಯೇ ಇಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಪೋಲೀಸರ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. ಆ ದಿನ ಈ ಪ್ರಕರಣದ 5 ನೇ ಆರೋಪಿ ಜಾಗ ತೋರಿಸಿದ್ದರು ಎಂದು ನಾನು ಪೋಲೀಸರು ಹೇಳಿಕೊಟ್ಟಿದ್ದರಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.